ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

ಸಿಸಿ ನಂಬರಃ 811/2025

ಸಿ.ಡಬ್ಲ್ಯೂಃ2 , ಪಿ.ಡಬ್ಲ್ಯೂಃ 2

ಸಾಕ್ಷಿದಾರರ ಹೆಸರು : ಪಾಯು

ತಂದೆಯ ಹೆಸರು : ಬಡ್ಕು ಮರಾಠಿ

ವಯಸ್ಸು : 54 ವರ್ಷ

ಉದ್ಯೋಗ : ಮನೆಯಲ್ಲಿ ಕೆಲಸ

ವಾಸ್ತವ್ಯ : ಉತ್ತರಕೊಪ್ಪ , ಮೂರ್ಡೇಶ್ವರ

ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 09/09/2025

ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,

ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಉತ್ತರಕೊಪ್ಪ ರಸ್ತೆಯ ಬದಿಗೆ ಸೊಪ್ಪನ್ನು ಕೊಯ್ಯುವಾಗ ಅಬಕಾರಿ ಇಲಾಖೆಯವರು ಕರೆದು ನನಗೆ ಒಂದು ಸಹಿ ಮಾಡಲು ಹೇಳಿದ್ದ ಕಾರಣ ನಾನು ಸಹಿ ಮಾಡಿದ್ದು ಇರುತ್ತದೆ. ಸದರಿ ಸಹಿಯನ್ನು ಯಾವ ಕಾರಣಕ್ಕೆ ಪಡೆದಿದ್ದರೆಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ-2 ,5 ಮತ್ತು 6 ರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಬಿ, 5 ಬಿ ಮತ್ತು 6 ಬಿ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲು : ಎಪಿಪಿಯವರಿಂದ,

ದಿಃ 21.11.2023 ರಂದು ಅಬಕಾರಿ ನಿರೀಕ್ಷಕರು ಮತ್ತು ಅವರ ಸಿಬ್ಬಂದಿಗಳ ಸಮಕ್ಷಮ ಈ ಪ್ರಕರಣದ ಆರೋಪಿಯ ಮನೆ ಮೇಲೆ ಅಬಕಾರಿ ದಾಳಿ ನಡೆಸುವ ಕಾಲಕ್ಕೆ ನನಗೆ ಹಾಗೂ ಚಾಸಾ 3 ಇವರನ್ನು ಪಂಚರಾಗಿ ಕರೆದಿದ್ದರು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಆರೋಪಿಯ ಮನೆಯನ್ನು ಶೋಧಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿಯ ಬಚ್ಚಲು ಮನೆಯಲ್ಲಿ ಬಿಳಿ ಪ್ಲಾಸ್ಟೀಕ್ ಕ್ಯಾನ್ ನಲ್ಲಿ 20 ಲೀ ಬೆಲ್ಲದ ಕೊಳೆಯನ್ನು ಜಪ್ತು ಮಾಡಿದರುತ್ತಾರೆ ಎಂದರೆ ಸರಿಯಲ್ಲ. ಮನೆಯ ಹಿಂದಿನ ಬಾಳೆ ತೋಟದಲ್ಲಿ 2 ಬಿಳಿ ಪ್ಲಾಸ್ಟೀಕ್ ಕ್ಯಾನುಗಳನ್ನು ಹೊಂಡ ತೆಗೆದು ಅದರಲ್ಲಿ ಅದರಲ್ಲಿ ಕಳ್ಳ ಬಟ್ಟಿ ಸರಾಯಿ ಇಟ್ಟಿದ್ದರು ಅದನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಪತ್ತೆಯಾದ ಅನಧೀಕೃತ ಮದ್ಯದಿಂದ ಪ್ಲಾಸ್ಟಿಕ್

ಬಾಟಲಿನಲ್ಲಿ ತಲಾ 500 ಎಮ್ ಎಲ್ ರಾಸಾಯನಿಕ ಪರೀಕ್ಷೆಗಾಗಿ ಬಿಳಿ ಬಟ್ಟೆ ಸುತ್ತಿ ಅರಗಿನಿಂದ ಸೀಲು ಮಾಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಕಳ್ಳಬಟ್ಟಿ ಸರಾಯಿಯನ್ನು ಅಬಕಾರಿ ಉಪ ಆಯುಕ್ತರ ಅನುಮತಿ ಪಡೆದು ಸ್ಥಳದಲ್ಲಿ ನಾಶ ಮಾಡಲಾಗಿತ್ತು ಎಂದರೆ ಸರಿಯಲ್ಲ. ಜಪ್ತು ಮಾಡಿದ ಮುದ್ದೆ ಮಾಲಿನ ಮೌಲ್ಯ ಅಂದಾಜು ರೂ. 6350 ಆಗಿತ್ತು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಬೆಳಿಗ್ಗೆ 7.55 ರಿಂದ 8.30 ಗಂಟೆಯವರೆಗೆ ಸ್ಥಳದಲ್ಲಿ ಮಾಡಿದ್ದರು ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ , ಸ್ವತ್ತು ಪಟ್ಟಿ ತಯಾರಿಸುವಾಗ , ಮಾಧರಿ ಮೊಹರು ತಯಾರಿಸುವಾಗ ಹಾಜರಿದ್ದು ಸಹಿ ಮಾಡಿದ್ದರೂ ಸಹ , ನನಗೆ ಎಲ್ಲಾ ವಿಷಯ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ಪೊಟೋ ತೆಗೆದಿದ್ದರೂ ಸಹ ಪೊಟೋದಲ್ಲಿ ನಾನು ಇದ್ದರೂ ಸಹ ಆರೋಪಿಗೆ ಸಹಾಯ ಆಗಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ .

ಸಹಿ ಇದೆ

ಪ್ರ.ದ.ನ್ಯಾ.ದಂ., ಭಟ್ಕಳ.